# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 488 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ. ಟಿ. ರವಿ ( ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30.01.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 3 ವರ್ಷಗಳಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಡಾ\|\| ಬಿ.ಆರ್ ಅಂಬೇಡ್ಕರ್ ಭವನ / ಡಾ\|\| ಬಾಬು ಜಗಜೀವನರಾಮ್ ಭವನ / ಸಮುದಾಯ ಭವನಗಳ ನಿರ್ಮಾಣ ಮಾಡಲು ಮಂಜೂರಾಗಿರುವ ಅನುದಾನವೆಷ್ಟು; | ಕಳೆದ 3 ವರ್ಷಗಳಲ್ಲಿ 2022-23ನೇ ಸಾಲಿನಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ 48 ಸ್ಥಳಗಳಲ್ಲಿ ಹೊಸದಾಗಿ /ಮುಂದುವರೆದ ಡಾ\|\| ಬಿ. ಆರ್ ಅಂಬೇಡ್ಕರ್ ಭವನ / ಡಾ\|\| ಬಾಬು ಜಗಜೀವನರಾಮ್ ಭವನ / ಸಮುದಾಯ ಭವನಗಳ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ರೂ.750.00 ಲಕ್ಷಗಳ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ. |
| ಆ | ಇದರಲ್ಲಿ ಎಷ್ಟು ಭವನಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಷ್ಟು ಭವನಗಳ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ; ಎಷ್ಟು ಭವನಗಳ ಕಾಮಗಾರಿಗಳು ಪ್ರಾರಂಭಗೊಂಡಿಲ್ಲ; (ವಿವರ ಒದಗಿಸುವುದು); | ಈ ಪೈಕಿ, 20 ಭವನಗಳ ಮುಂದುವರೆದ ಕಾಮಗಾರಿಗೆ ಹಣ ಬಳಕೆ ಪ್ರಮಾಣ ಪತ್ರ ಮತ್ತು ಭವನದ ಛಾಯಚಿತ್ರಗಳನ್ನು ಜಿಲ್ಲೆಯಿಂದ ಪಡೆದ ನಂತರ ಅನುದಾನ ಬಿಡುಗಡೆ ಮಾಡಬಹುದಾಗಿರುತ್ತದೆ ಹಾಗೂ ಹೊಸದಾಗಿ ಮಂಜೂರಾದ 28 ಭವನಗಳ ಪೈಕಿ 27 ಭವನಗಳಿಗೆ ನಿವೇಶನವಿರುವುದಾಗಿ 1(ಒಂದು) ಭವನಕ್ಕೆ ನಿವೇಶನ ಪಡೆಯಲು ಕ್ರಮವಹಿಸುತ್ತಿರುವುದಾಗಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ ಇವರು ವರದಿ ನೀಡಿರುವ ಹಿನ್ನೆಲೆಯಲ್ಲಿ ದಿನಾಂಕ:22-02-2023ರಲ್ಲಿ ಮಂಜೂರಾತಿ ಮೊತ್ತ ರೂ.480.00 ಲಕ್ಷಗಳ ಪೈಕಿ ಮೊದಲ ಕಂತಿನ ಅನುದಾನ ರೂ.120.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. |
| ಇ | 2022-23ನೇ ಸಾಲಿನಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ವಿವಿಧೆಡೆ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ಮಂಜೂರಾಗಿದ್ದರೂ ಸಹ ಇನ್ನೂ ಕಾಮಗಾರಿಗಳನ್ನು ಪ್ರಾರಂಭಿಸದೆ ಇರಲು ಕಾರಣಗಳೇನು; ಈ ಕಾಮಗಾರಿಗಳನ್ನು ಅನುಷ್ಠಾಣಗೊಳಿಸಲು | ಆದರೆ ಸದರಿ ಕಾಮಗಾರಿಗಳ ಟೆಂಡರ್ ಕರೆಯುವುದಕ್ಕೆ ಸಂಬಂಧಿಸಿದಂತೆ ಕ್ರಮವಹಿಸಬೇಕಾಗಿರುವುದರಿಂದ ಸ್ಪಷ್ಟತೆ ನೀಡಬೇಕಾಗಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ರವರು ಕೋರಿರುವುದರಿಂದ ಸದರಿ ಕಾಮಗಾರಿಗಳನ್ನು |

| | | |
|---|---|---|
| | ನಿಗದಿಪಡಿಸಿರುವ ಏಜೆನ್ಸಿ / ಇಲಾಖೆ ಯಾವುದು; | ಅನುಷ್ಠಾನಗೊಳಿಸುವ ಕುರಿತು ನಿರ್ದೇಶನ ನೀಡುವಂತೆ ಉಪನಿರ್ದೇಶಕರು, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರನ್ನು ಕೋರಲಾಗಿರುತ್ತದೆ.<br><br>ಮುಂದುವರೆದು, ಆರ್ಥಿಕ ಇಲಾಖೆಯ ಸುತ್ತೋಲೆ ಸಂ: ಆಇ-1: ಟಿಎಫ್‌ಪಿ-2023, ದಿ:31-07-2023 ರ ಸುತ್ತೋಲೆಯ ಕ್ರ.ಸಂ. 3 ರಲ್ಲಿ, ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (unstarted) ಕಾಮಗಾರಿಗಳ ಬಗ್ಗೆ, ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಯು ಕಾರ್ಯದರ್ಶಿಗಳು ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ.<br><br>ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಜೂರಾದ 27 ಸ್ಥಳಗಳಲ್ಲಿ ಡಾ\|\| ಬಿ.ಆರ್ ಅಂಬೇಡ್ಕರ್ / ಡಾ\|\| ಬಾಬು ಜಗಜೀವನರಾಮ್ ಸಮುದಾಯ ಭವನಗಳ ನಿರ್ಮಾಣ ಸಂಬಂಧ ರೂ.480.00 ಲಕ್ಷಗಳಿಗೆ ಮಂಜೂರಾತಿ ನೀಡಿ, ಈಗಾಗಲೇ ರೂ.120.00 ಲಕ್ಷಗಳನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಸುತ್ತೋಲೆಯನ್ವಯ ಅನುಮತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಈ | ಈ ಭವನಗಳ ನಿರ್ಮಾಣ ಕಾಮಗಾರಿಗಳಿಗಾಗಿ ಮಂಜೂರಾಗಿರುವ ಮತ್ತು ಬಿಡುಗಡೆ ಆಗಿರುವ ಅನುದಾನ ಎಷ್ಟು; (ವಿವರ ನೀಡುವುದು); | |
| ಉ | ಯಾವ ಕಾಲಮಿತಿಯಲ್ಲಿ ಈ ಭವನಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು? | |

**ಸಕಇ 112 ಪಕವಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**